ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆಗಳ ಇಲಾಖೆ)

ಸಂಖ್ಯೆ: ವಾ.ತೆ.ಜಂ.ಆ(ಕಾ.ವ್ಯ.)/ಸಿ.ಆರ್.02/2017-18

ವಾಣಿಜ್ಯ ತೆರಿಗೆಗಳ ಆಯುಕ್ತರವರ ಕಛೇರಿ,
ವಾಣಿಜ್ಯ ತೆರಿಗೆ ಕಾರ್ಯಾಲಯ, ಗಾಂಧಿನಗರ
ಬೆಂಗಳೂರು, ದಿನಾಂಕ: 09.10.2017

ವಾಣಿಜ್ಯ ತೆರಿಗೆಗಳ ಆಯುಕ್ತರ ಸುತ್ತೋಲೆ ಸಂಖ್ಯೆ: 10 /2017-18

ವಿಷಯ: ಇಲಾಖೆಯು ನಿರ್ವಹಣೆ ಮಾಡುವ ವಿವಿಧ ತೆರಿಗೆ ಕಾಯ್ದೆಗಳ ಅಡಿಯಲ್ಲಿ ರಿಮಾಂಡ್ ಆದ ಪ್ರಕರಣಗಳನ್ನು ವಿಳಂಬವಿಲ್ಲದೇ ಇತ್ಯರ್ಥಗೊಳಿಸುವ ಬಗ್ಗೆ.

ಉಲ್ಲೇಖ: 1) ವಾಣಿಜ್ಯ ತೆರಿಗೆಗಳ ಆಯುಕ್ತರ ಸುತ್ತೋಲೆ ಸಂಖ್ಯೆ. ಎಂಎಸ್ಆರ್.3084/67-68, ದಿನಾಂಕ: 08.02.1968.

2) ವಾಣಿಜ್ಯ ತೆರಿಗೆಗಳ ಆಯುಕ್ತರ ಸುತ್ತೋಲೆ ಸಂಖ್ಯೆ. 2/88-89, ದಿನಾಂಕ: 13.4.1998.

***

ಇಲಾಖೆಯು ನಿರ್ವಹಿಸುತ್ತಿರುವ ವಿವಿಧ ತೆರಿಗೆ ಕಾನೂನುಗಳ ಅಡಿಯಲ್ಲಿ ಪ್ರಥಮ ಮೇಲ್ಮನವಿ ಪ್ರಾಧಿಕಾರ, ಸ್ವಯಂ ಪರಿಷ್ಕರಣಾ ಪ್ರಾಧಿಕಾರ, ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯಗಳಿಂದ ಕರನಿರ್ಧರಣೆ ಅಥವಾ ಮರುಕರನಿರ್ಧರಣೆ ಅಥವಾ ಇತರೇ ಶಾಸನಬದ್ಧ ನಡಾವಳಿಗಳಿಗೆ ಸಂಬಂಧಿಸಿದಂತೆ ರಿಮಾಂಡ್ ಆಗಿ ಬರುವ ಪ್ರಕರಣಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಕಾಲಮಿತಿಯನ್ನು ನಿಗದಿಪಡಿಸಿ ಈಗಾಗಲೇ ಉಲ್ಲೇಖಿತ ಸುತ್ತೋಲೆಗಳಲ್ಲಿ ಸೂಚನೆಗಳನ್ನು ನೀಡಲಾಗಿದೆ. ಇಂತಹ ಪ್ರಕರಣಗಳ ವಿಲೇವಾರಿಯಲ್ಲಿ ಆಗುತ್ತಿರುವ ವಿಳಂಬದಿಂದಾಗಿ ರಾಜಸ್ವ ನಷ್ಟ ಉಂಟಾಗುತ್ತಿರುವ ಬಗ್ಗೆ ಮಹಾಲೇಖಪಾಲರು ಆಕ್ಷೇಪಣೆಗಳನ್ನು ಎತ್ತುತ್ತಿರುವ ಬಗ್ಗೆಯೂ ಸಹ ಸದರಿ ಸುತ್ತೋಲೆಗಳಲ್ಲಿ ಉಲ್ಲೇಖಿಸಿ, ಇಂತಹ ಪ್ರಕರಣಗಳ ವಿಲೇವಾರಿಗೆ ಕಾಲಮಿತಿಯನ್ನು ನಿಗದಿಪಡಿಸಿ, ಮಾರ್ಗಸೂಚಿಗಳನ್ನು ನೀಡಲಾಗಿತ್ತು.

2. ಆದಾಗ್ಯೂ ಇಂತಹ ಸೂಚನೆಗಳು ಹಾಗೂ ನಿರ್ದೇಶನಗಳನ್ನು ಪಾಲಿಸದೇ ಹಾಗೂ ನಿಗದಿಪಡಿಸಿದ ಕಾಲಮಿತಿಯೊಳಗೆ ಅಥವಾ ಶಾಸನಬದ್ಧ ಕಾಲಮಿತಿಯೊಳಗೆ ಪ್ರಕರಣಗಳನ್ನು ಇತ್ಯರ್ಥಪಡಿಸದೇ ಇರುವುದನ್ನು ಗಮನಿಸಲಾಗಿದೆ. ಈ ರೀತಿ ಪ್ರಕರಣಗಳನ್ನು ವರ್ಷಾನುಗಟ್ಟಲೇ ಇತ್ಯರ್ಥಗೊಳಿಸದೇ ಇರುವುದು ಅಧಿಕಾರಿಗಳ ಕರ್ತವ್ಯ ಲೋಪವಾಗುವುದಲ್ಲದೇ, ಕರದಾತರಿಗೆ ಶಾಸನಬದ್ಧವಾಗಿ ನ್ಯಾಯ ಒದಗಿಸಿದಂತಾಗುವುದಿಲ್ಲ. ಅಲ್ಲದೇ ರಾಜಸ್ವದ

ಪರವಾಗಿರುವ ಕೆಲವು ಪ್ರಕರಣಗಳಲ್ಲಿ ಇಂತಹ ವಿಳಂಬವು ರಾಜಸ್ವ ನಷ್ಟಕ್ಕೂ ಎಡೆ ಮಾಡಿಕೊಡುತ್ತದೆ ಹಾಗೂ ಕೆಲವು ಸಂದರ್ಭಗಳಲ್ಲಿ ಪ್ರಕರಣಗಳ ಕರನಿರ್ಧರಣೆ/ಮರುಕರನಿರ್ಧರಣೆಯ ಕಾಲಮಿತಿ ಮೀರುವ ಸಂಭವವಿರುತ್ತದೆ. ಅನೇಕ ಪ್ರಕರಣಗಳಲ್ಲಿ ಕರದಾತರು ವಿಳಂಬದ ಬಗ್ಗೆ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ದಾಖಲು ಮಾಡಿದ್ದು, ಇಲಾಖೆ ಹಾಗೂ ಸರ್ಕಾರವು ತುಂಬಾ ಮುಜುಗರಕ್ಕೆ ಒಳಪಟ್ಟಿರುವುದು ವರದಿಯಾಗಿರುತ್ತದೆ.

3. ಆದುದರಿಂದ ಇಲಾಖೆಯ ಎಲ್ಲಾ ಅಧಿಕಾರಿಗಳು ಇನ್ನು ಮುಂದೆ ವಿವಿಧ ಪ್ರಾಧಿಕಾರಗಳಿಂದ ರಿಮಾಂಡ್ ಆಗಿ ಬರುವ ಪ್ರಕರಣಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಕೆಳಕಂಡಂತೆ ನಿರ್ದೇಶನಗಳನ್ನು ನೀಡಲಾಗಿದೆ.

ಅ) ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಇನ್ನು ಮುಂದೆ ತಮ್ಮ ಕಛೇರಿಗಳಲ್ಲಿ ಕೆಳಕಂಡ ನಮೂನೆಗಳಲ್ಲಿ ವಹಿಗಳನ್ನು ಪ್ರಾರಂಭಿಸಿ, ಯಾವುದೇ ಇಂತಹ ಪ್ರಕರಣಗಳನ್ನು ತಮ್ಮ ಕಛೇರಿಯಲ್ಲಿ ಸ್ವೀಕರಿಸಿದ ಕೂಡಲೇ ಅವುಗಳನ್ನು ಸದರಿ ವಹಿಯಲ್ಲಿ ಕೆಳಗಿನ 'ಅನುಬಂಧ-ಅ' ರಂತೆ ದಾಖಲಿಸತಕ್ಕದ್ದು. ಅದೇ ರೀತಿ ಪ್ರಕರಣಗಳ ವಿಲೇವಾರಿಗೆ ಸಂಬಂಧಿಸಿದ ಘೋಷ್ವಾರೆಯನ್ನು ಸದರಿ ವಹಿಯಲ್ಲಿ ಆಯಾ ಮಾಹೆಯ ಅಂತ್ಯದಲ್ಲಿ 'ಅನುಬಂಧ-ಆ' ರಲ್ಲಿ ತೋರಿಸಿರುವಂತೆ ದಾಖಲಿಸತಕ್ಕದ್ದು ಹಾಗೂ ಇದೇ ನಮೂನೆಗಳಲ್ಲಿ ವಿವರಗಳನ್ನು ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕಾನೂನು ವ್ಯವಹಾರಗಳು) ಇವರಿಗೆ ಪ್ರತಿ ತಿಂಗಳು ಸಲ್ಲಿಸತಕ್ಕದ್ದು.

ಅನುಬಂಧ – 'ಅ'

ಕ್ರಮ ಸಂಖ್ಯೆ	ಕರದಾತರ ಹೆಸರು	ಕರನಿರ್ಧರಣೆ ವರ್ಷ	ಕಾಯ್ದೆ	ಯಾವ ಪ್ರಾಧಿಕಾರದಿಂದ ಸ್ವೀಕೃತವಾಗಿದೆ	ಸ್ವೀಕರಿಸಿದ ದಿನಾಂಕ	ಷರಾ

ಅನುಬಂಧ – 'ಆ'

ಪ್ರಕರಣಗಳ ಆರಂಭಿಕ ಶಿಲ್ಕು	ಸ್ವೀಕೃತಿ	ಒಟ್ಟು	ವಿಲೇವಾರಿ	ಬಾಕಿ

ಆ) ಪ್ರಕರಣಗಳಿಗೆ ಸಂಬಂಧಿಸಿದ ಕರನಿರ್ಧರಣೆ/ಮರುಕರನಿರ್ಧರಣೆ ಕಡತಗಳು ಇನ್ನೂ ಸ್ವೀಕೃತವಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಪ್ರಾಧಿಕಾರವನ್ನು ಸಂಪರ್ಕಿಸಿ ಕಡತವನ್ನು ಪಡೆದುಕೊಳ್ಳಲು ಕ್ರಮಕೈಗೊಳ್ಳತಕ್ಕದ್ದು.

ಇ) ತಮ್ಮ ಕಛೇರಿ/ವಿಭಾಗಗಳಿಗೆ ಸಂಬಂಧಪಡದ ಕಡತಗಳನ್ನು ಕೂಡಲೇ ಸೂಕ್ತ ಕಾರ್ಯವ್ಯಾಪ್ತಿ ಹೊಂದಿರುವ ಅಧಿಕಾರಿಗಳಿಗೆ ವರ್ಗಾಯಿಸತಕ್ಕದ್ದು.

ಈ) ಕಡತ ಸ್ವೀಕೃತಿಯ ಮೂರು ತಿಂಗಳಿನ ಒಳಗಾಗಿ ಸಂಬಂಧಿಸಿದ ಶಾಸನಬದ್ಧ ನಡಾವಳಿಗಳನ್ನು ಪೂರ್ಣಗೊಳಿಸಿ ಪ್ರಕರಣವನ್ನು ವಿಲೇವಾರಿ ಮಾಡತಕ್ಕದ್ದು.

ಉ) ಮನವಿಗಳ ಜಂಟಿ ಆಯುಕ್ತರುಗಳು/ಸ್ವಯಂ ಪರಿಷ್ಕರಣಾ ಪ್ರಾಧಿಕಾರಿಗಳು ಅಥವಾ ಇತರೇ ಯಾವುದೇ ಪ್ರಾಧಿಕಾರಿಗಳು ಸಹ ತಮಗೆ ರಿಮಾಂಡ್ ಆದ ಪ್ರಕರಣಗಳನ್ನು ಆದ್ಯತೆ ಮೇರೆಗೆ ಮೂರು ತಿಂಗಳ ಒಳಗೆ ವಿಲೇವಾರಿ ಮಾಡತಕ್ಕದ್ದು.

4) ಮೇಲಿನ ಸೂಚನೆಗಳನ್ನು ಎಲ್ಲಾ ಅಧಿಕಾರಿಗಳೂ ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ ಹಾಗೂ ಇದರಲ್ಲಿ ಯಾವುದೇ ಲೋಪ ಕಂಡುಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು.

(ರಿತ್ವಿಕ್ ಪಾಂಡೆ)
ವಾಣಿಜ್ಯ ತೆರಿಗೆಗಳ ಆಯುಕ್ತರು,
ಕರ್ನಾಟಕ, ಬೆಂಗಳೂರು.

ಇವರಿಗೆ:
ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ